**3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ,**

**ಕಡೂರು.**

**<u>ಸಿ.ಸಿ.ನಂ.191/2019</u>**

**ದಿನಾಂಕಃ02.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ರವಿಕುಮಾರ್ | ಆಸಾ-1 |
| ತಂದೆಯ ಹೆಸರು ಃ | ಚಿಕ್ಕಣ್ಣ | |
| ವಯಸ್ಸು ಃ | 52 ವರ್ಷ | |
| ಉದ್ಯೋಗ ಃ | ಪ್ರಥಮ ದರ್ಜೆ ಗುತ್ತಿಗೆದಾರರು | |
| ವಾಸ ಃ | ಆಡಿಗೆರೆ | |

**<u>ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ ಸಿ.ಒ.ವೈ. ವಕೀಲರಿಂದಃ</u>**

ನಾನು ಮತ್ತು ಪಿರ್ಯಾದುದಾರರು ಪ್ರಥಮ ದರ್ಜೆ ಗುತ್ತಿಗೆದಾರರಾಗಿದ್ದು ನಾನು ಅವರ ಬಳಿ ರೂ.2,00,000/- ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ. ಅದರ ಬಾಬ್ತು ನನ್ನ ಖಾತೆಯ ಸಿಂಡಿಕೇಟ್ ಬ್ಯಾಂಕ್ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೇನೆ. ಪಿರ್ಯಾದುದಾರರು ನನಗೆ ತಿಳುವಳಿಕೆ ಪತ್ರ ಕಳುಹಿಸಿದ್ದು, ಆಗ ನಾನು ನನ್ನ ಸ್ನೇಹಿತ ಯೋಗೀಶ್ ಬಿನ್ ಶ್ರೀಕಂಠಯ್ಯ ಅವರು ಹೋಗಿ ಪಿರ್ಯಾದುದಾರರಿಗೆ ರೂ.75,000/- ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇವೆ. ದಿಃ18.08.2018 ರಲ್ಲಿ ನಾನು ಚೆಕ್ಕು ನೀಡಿದ್ದು, ಅದನ್ನು ಪಿರ್ಯಾದುದಾರರು ನನ್ನ ಖಾತೆಗೆ ನಗದೀಕರಣಕ್ಕಾಗಿ ಸಲ್ಲಿಸಿ ಹಣವನ್ನು ಪಡೆದುಕೊಂಡಿರುತ್ತಾರೆ. ಈ ಸಂಬಂಧವಾಗಿ ನಾನು ನನ್ನ ಖಾತೆಯ ಸ್ಟೇಟ್ಮೆಂಟನ್ನು ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಂತರ ನಾನು ಪಿರ್ಯಾದುದಾರರನ್ನು ನಿಪಿ-1 ಚೆಕ್ಕನ್ನು ವಾಪಸ್ಸು ನೀಡುವಂತೆ ಕೇಳಿದ್ದು, ಆದರೆ ಅವರು ಅದನ್ನು ನೀಡದೇ ಈ ಪ್ರಕರಣವನ್ನು ದಾಖಲಿಸಿರುತ್ತಾರೆ. ಪಿರ್ಯಾದುದಾರರಿಗೆ ನಾನು ರೂ.75,000/- ನೀಡಿದಾಗ ಪ್ರಕರಣ ದಾಖಲು ಮಾಡುವುದಿಲ್ಲ ಎಂದು ಹೇಳಿದ ಕಾರಣ ಪಿರ್ಯಾದುದಾರರು ಕಳುಹಿಸಿರುವ ತಿಳುವಳಿಕೆ ಪತ್ರಕ್ಕೆ ಪ್ರತ್ಯುತ್ತರವನ್ನು ಕಳುಹಿಸಿರುವುದಿಲ್ಲ. ಈ ಪ್ರಕರಣ ದಾಖಲು ಮಾಡಿದ ನಂತರ ಪಿರ್ಯಾದುದಾರರಿಗೆ ರೂ.1,25,000/- ಹಣವನ್ನು ಚೆಕ್ಕು ಮೂಲಕ

ನೀಡಿರುತ್ತೇನೆ. ಆದ್ದರಿಂದ ಈ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರುತ್ತೇನೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

ಸಹಿ/-
ಸಿ/ಸಿ 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.